ರೂ 29 00 ಲಕ್ಷಗಳ ಅಂದಾಜಿನಲ್ಲಿ ತೆಗೆದುಕೊಂಡಿದ್ದು, ಈ ಎಲ್ಲಾ ಕಾಮಗಾರಿಗಳಿಗೂ ಟೆಂಡರ್ ಕರೆಯಲಾಗಿದೆ

ಇ) 2006–07ನೇ ಸಾಲಿನ ಕಾರ್ಯಕ್ರಮದಲ್ಲಿ ಆಲಬಾಳ–ಮುತ್ತೂರ ಕಾಮಗಾರಿಗಳು ಸೇರಿದ್ದು, ಈಗ ' ಟೆಂಡರ್ ಕರೆಯಲಾಗಿದ್ದು, ಕೆಲಸ ಪ್ರಾರಂಭವಾಗಿರುವುದಿಲ್ಲ

ಈ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ

ಉ) ಜಮಖಂಡಿ ತಾಲ್ಲೂಕಿನಲ್ಲಿ ಭೂ ಸುಧಾರಣೆಯ ಹೊಲ ಬಸಿಗಾಲುವೆಗೆ ಸಂಬಂಧಿಸಿದಂತೆ ಈ ಕೆಳಕಂಡ ಕಾಮಗಾರಿಗಳು ಮಂಜೂರಾಗಿದ್ದು, ಈಗಾಗಲೇ ಟೆಂಡರ್ ಕರೆಯಲಾಗಿದ್ದು, ಈ ಮಾಹೆಯ ಅಂತ್ಯದೊಳಗೆ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು

ಕ್ರ ಸಂ	ಗ್ರಾಮ ಹಾಗೂ ಬ್ಲಾಕ್	ಕ್ಷೇತ್ರ (ಹೆಕ್ಟೇರ್)	ಟೆಂಡರಿಗಿಟ್ಟ ಮೊತ್ತ (ರೂ)
1	ಆಲಬಾಳ–I	69 22	254032
2	ಆಲಬಾಳ– II	92 54	369819
3	ಆಲಬಾಳ– III	93 74	358626
4	ಮೈಗೂರ್– III	60 00	239927
5	ಮೈಗೂರ್– IV	61 30	203974
6	ಮುತ್ತೂರ– I	67 73	246865
7	ಮುತ್ತೂರ– II	71 20	273645
8	ಕುಲಹಳ್ಳಿ– I	63 87	238253
9	ಕುಲಹಳ್ಳಿ– II	53 92	205908
10	ಕುಲಹಳ್ಳಿ– III	83 35	300364
11	ಕುಲಹಳ್ಳಿ– IV	60 61	215967
	ಒಟ್ಟು	**777 48**	**2907380**

1043 (1269) ಶ್ರೀ ಸಿಂಧೂರ ಜಿ ರಾಜಶೇಖರ (ಶಿಗ್ಗಾಂವ್). ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಶಿಗ್ಗಾಂವ– ಸವಣೂರು ತಾಲ್ಲೂಕುಗಳಲ್ಲಿ ಖಾಲಿ ಇರುವ ಗ್ರಾಮ ಪಂಚಾಯತಿ ಕಾರ್ಯದರ್ಶಿಗಳ ಹುದ್ದೆಗಳು ಎಷ್ಟು,

ಆ) ಎಷ್ಟು ಗ್ರಾಮ ಪಂಚಾಯತಿಗಳಲ್ಲಿ ಹಣ ದುರುಪಯೋಗದ ಪ್ರಕರಣಗಳು ನಡೆದಿವೆ ಹಾಗೂ ಎಷ್ಟು ಹಣ ದುರುಪಯೋಗವಾಗಿದೆ,

ಇ) ಎಷ್ಟು ಕಾರ್ಯದರ್ಶಿಗಳ ಮೇಲೆ ಕ್ರಮ ಕೈಗೊಳ್ಳಲಾಗಿದೆ ಹಾಗೂ ಅವರಿಂದ ವಸೂಲಾದ ಹಣ ಎಷ್ಟು,

ಈ) ಶಿಗ್ಗಾಂವ ತಾಲ್ಲೂಕ್ ತಡಸ ಗ್ರಾಮ ಪಂಚಾಯತ್‌ನಲ್ಲಿ ಹಣ ದುರುಪಯೋಗವಾಗಿದ್ದು, ತನಿಖೆ ಮಾಡಲು ಸಿ ಓ ಡಿ ಗೆ ಒಪ್ಪಿಸಲು ಸರ್ಕಾರ ಉದ್ದೇಶಿಸಿದೆಯೇ?

ಶ್ರೀ ಸಿ ಎಂ ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)

ಅ) ಶಿಗ್ಗಾಂವ ತಾಲ್ಲೂಕಿನಲ್ಲಿ ಖಾಲಿ ಹುದ್ದೆ ಇಲ್ಲ ಸವಣೂರು ತಾಲ್ಲೂಕಿನಲ್ಲಿ 1 ಹುದ್ದೆ ಖಾಲಿ ಇದೆ

ಆ) ಶಿಗ್ಗಾಂವ ತಾಲ್ಲೂಕು, ತಡಸ ಗ್ರಾಮ ಪಂಚಾಯ್ತಿಯಲ್ಲಿ ಹಣ ದುರುಪಯೋಗದ ಪ್ರಕರಣ ನಡೆದಿದೆ ರೂ 9,26,755/–ಗಳು

ಇ) ಇಬ್ಬರೂ ಕಾರ್ಯದರ್ಶಿಗಳ ಮೇಲೆ ಕ್ರಮ ಜರುಗಿಸಲಾಗಿದೆ ಇಲಾಖಾ ವಿಚಾರಣೆ ನಂತರ ಹಣ ವಸೂಲಾತಿ ಬಗ್ಗೆ ಕ್ರಮ ವಹಿಸಲಾಗುವುದು

ಈ) ಇಲ್ಲ

1044 (1270) ಶ್ರೀ ಸಿಂಧೂರ ಜಿ ರಾಜಶೇಖರ (ಶಿಗ್ಗಾಂವ್). ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ರಾಜ್ಯದಾದ್ಯಂತ ಇರುವ ಖಾಸಗಿ ಹಾಗೂ ಸರ್ಕಾರಿ ಟಿ ಸಿ ಎಚ್ ಕಾಲೇಜುಗಳ ಸಂಖ್ಯೆ ಎಷ್ಟು,

ಆ) ರಾಜ್ಯದಾದ್ಯಂತ ಸುವ್ಯವಸ್ಥಿತ ಕಟ್ಟಡ ಮತ್ತಿತರ ಮೂಲ ಸೌಲಭ್ಯಗಳನ್ನು ಹೊಂದಿರುವ ಖಾಸಗಿ ಹಾಗೂ ಸರ್ಕಾರಿ ಕಾಲೇಜುಗಳ ಸಂಖ್ಯೆ ಎಷ್ಟು (ಕಾಲೇಜುವಾರು ಮಾಹಿತಿ ಒದಗಿಸುವುದು)